

ನಿಜವಾದ ಕಾರಣ ಎಂದು ನನಗೆ ಅನುಮಾನ.

ಆದರೆ ಇದರಲ್ಲಿ ನನ್ನ ತಪ್ಪಿಲ್ಲ.

ಸುಬ್ಬರಾಜು ನಮ್ಮ ಭಜನಾ ಸಮಾಜದ ಸದಸ್ಯ. ಕೋಟೀಶ್ವರ. "ಹೊಸ ರೀತಿಯ ಪ್ಲಾಸ್ಟಿಕ್ ಬಂದಿದೆ. ಅದರಿಂದ ಬಾಚಣಿಗೆ ಮಾಡಿದರೆ ಒಂದು ಪೈಸೆಗೆ ಹತ್ತು ಪೈಸೆ ಲಾಭ" ಎಂದು ಹೇಳಿದ್ದರಿಂದ ಇಬ್ಬರೂ ತಲಾ ಅರ್ಧರ್ಧ ಬಂಡವಾಳ ಹೂಡಿ ಫ್ಯಾಕ್ಟರಿ ಶುರು ಮಾಡಿದೆವು.

"ಗ್ರಹಗಳು ಅದ್ಭುತವಾಗಿವೆ. ಗೋ ಅಹೆಡ್" ಎಂದಿದ್ದರು ನನ್ನ ಮಾವನವರು. ವಾಸ್ತು ಇತ್ಯಾದಿಗಳನ್ನು ನೋಡಿಕೊಂಡು ಷೆಡ್ಡು ಇಟ್ಟೆವು. ಪೂರ್ವ ದಿಕ್ಕಿಗೆ ಷೆಡ್ಡಿನ ಮುಖ. ಸುಬ್ಬರಾಜು ಗುರು ಹರಿದ್ವಾರ್‌ನಲ್ಲಿದ್ದಾರೆ. ಅಲ್ಲಿಂದಲೇ ಝೂಮ್ ಮೀಟಿಂಗಿನಲ್ಲಿ ಮುಹೂರ್ತವಿಟ್ಟುಕೊಟ್ಟರು.

ಪ್ರಾರಂಭೋತ್ಸವಕ್ಕೆ ಗುರುಗಳು ಅಷ್ಟು ದೂರದಿಂದ ನಾಲ್ವರು ಶಿಷ್ಯರೊಂದಿಗೆ ಬಂದರು. ಒಂದು ಲಕ್ಷ ರೂಪಾಯಿ ಖರ್ಚಾದರೇನಂತೆ, 'ನಭೂತೋ ನ ಭವಿಷ್ಯತಿ' ಎನ್ನುವಂತೆ ಯಜ್ಞ ಮಾಡಿದರು.

ಆಗ ನಡೆದ ಒಂದು ಅದ್ಭುತವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಆತ ಮಂತ್ರವನ್ನು ಉಚ್ಚರಿಸುತ್ತಾ ಇದ್ದಾಗ ಹೋಮಕುಂಡದಿಂದ ತನ್ನಷ್ಟಕ್ಕೆ ತಾನೇ ಜ್ವಾಲೆ ಮೇಲೆ ಎದ್ದು ಬಂದಿತ್ತು. ಅದು ಪ್ರಜ್ವಲಿಸಿ ತನ್ನ ನಾಲಗೆ ಚಾಚಿದ್ದು, ಆ ಅಗ್ನಿಯಲ್ಲಿ ಹವಿಸ್ಸನ್ನು ಸಮರ್ಪಿಸಿದ್ದು ಒಂದು ಮಹಾದ್ಭುತ ದೃಶ್ಯ.

ಆಗತಾನೇ ಹೊಸದಾಗಿ ಫೇಸ್ ಬುಕ್ ಬಂದಿದ್ದ ದಿನಗಳವು. ಅರಣಿಗಳಿಂದ ಉರಿಸದೇ ಕೇವಲ ಮಂತ್ರಗಳಿಂದ ಅಗ್ನಿ ಉರಿದಿದ್ದರ ವೀಡಿಯೋ ಹಾಕಿದ್ದಕ್ಕೆ ಕೆಲವು ಸಾವಿರ ಲೈಕುಗಳೂ, ಬಹಳವೇ ಹೆಸರೂ ಬಂದವು. ನನ್ನ ಮಗಳು ಮಾತ್ರ "ಕೆಳಗೆ ರಂಜಕ ಇಟ್ಟಿದ್ದಿರಬೇಕು ಅವರು" ಎಂದು ತುಟಿ ಕೊಂಕಿಸಿದಳು. ಹೇಳಿದೆನಲ್ಲಾ. ಅಮ್ಮನ ಹೋಲಿಕೆ.